**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ21-03-2022**

**ಪಾಟೀ ಸವಾಲುಃ** 2 ರಿಂದ 4 ಮತ್ತು 6 ರಿಂದ 8 ನೇ ಪ್ರತಿವಾದಿಯರ ಪರ ಶ್ರೀ ಸಿ.ಡಿ.ಎಸ್ ವಕೀಲರಿಂದ

ಪ್ರತಿವಾದಿಯರು ಜೆ ಅನಿಲ್ ರವರು **1** ನೇ ವಾದಿಯನ್ನು ಮದುವೆಯಾದಾಗಿನಿಂದ ಪರಿಚಯವಿರುತ್ತಾರೆ. **1** ನೇ ವಾದಿ ನನ್ನ ಖಾಸಾ ಅಕ್ಕನ ಮಗಳು. ನನ್ನ ಪ್ರಮಾಣ ಪತ್ರದಲ್ಲಿ **1** ನೇ ವಾದಿ ನನ್ನ ಅಕ್ಕನ ಮಗಳು ಎಂದು ಹೇಳಿರುವುದಿಲ್ಲ ಎಂದರೆ ಸರಿ. ಸೋಮೇಗೌಡ ರವರ ಹೆಂಡತಿ ದ್ಯಾವಮ್ಮ ನನ್ನ ದೊಡ್ಡಪ್ಪನ ಮಗಳು. ಜೆ ಅನಿಲ್ ಮತ್ತು **1** ನೇ ವಾದಿಯ ಮದುವೆಯಾಗುವ ಪೂರ್ವದಲ್ಲಿ ಹೆಣ್ಣು ನೋಡಲು ಹೋಗಿರುವುದಿಲ್ಲ ಎಂದರೆ ಸಾಕ್ಷಿದಾರರು ಅವರದು ಪ್ರೇಮ ವಿವಾಹ ಎಂದು ನುಡಿಯುತ್ತಾರೆ. **1** ನೇ ವಾದಿಯನ್ನು ಮದುವೆಯಾಗುವ ಪೂರ್ವದಲ್ಲಿ ಜೆ ಅನಿಲ್ ರವರಿಗೆ ಮೊದಲೇ ಮದುವೆಯಾಗಿತ್ತಾ ಎಂಬ ಬಗ್ಗೆ ನಮಗೆ ಗೊತ್ತಿಲ್ಲ. **1** ನೇ ವಾದಿಯ ಮದುವೆಯಲ್ಲಿ ಯಾವುದೇ ಪೋಟೋ ತೆಗೆಸಿರುವುದಿಲ್ಲ. ನಾವು ಗೌಡರ ಪೈಕಿಯಾದ್ದರಿಂದ ನಮ್ಮ ಹೆಸರಿನ ಹಿಂದೆ ಮುಂದೆ ಗೌಡ ಎಂದು ಇರಬೇಕು ಎಂದರೆ ಸರಿ. ನನ್ನ ಅಜ್ಜನ ಹೆಸರು ತಿಮ್ಮೇಗೌಡ. ನಾಗಮ್ಮ ಮತ್ತು ಜನಾರ್ಧನ್ ಕುರೂಪ್ ರವರ ಜಾತಿ ಮತ ಗೊತ್ತಿಲ್ಲ ಎಂದರೆ ಸಾಕ್ಷಿದಾರರು ಅವರು ಮಲೆಯಾಳಿ ಪಂಗಡಕ್ಕೆ ಸೇರಿದವರು ಎಂದು ನುಡಿಯುತ್ತಾರೆ. ಜೆ ಅನಿಲ್ ರವರು ಜೀವಂತವಿದ್ದಾಗ ಅವರಿಗೆ ಸೇರಿದ ಆಸ್ತಿಯ ಸಂಬಂಧ ಯಾವ ಕಾಗದ ಪತ್ರಗಳನ್ನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿಃ **26-06-1998** ರಲ್ಲಿ ಜೆ ಅನಿಲ್ ರವರ ಮದುವೆ ಕಮಲಾಕ್ಷಿ ಮತ್ತು ಪಾಪಣ್ಣ ರವರ ಮಗಳು ಪಾವನ ರವರ ಜೊತೆ ಆಗಿರುತ್ತದೆ ಎಂದರೆ ಸರಿ. ದಿಃ **21-07-1998** ರಲ್ಲಿ ಜೆ ಅನಿಲ್ ಮತ್ತು ಪಾವನ ನಾಗಮ್ಮರವರಿಂದ ನಗದು **35** ಸಾವಿರ ಹಣ ಪಡೆದು ಅವರ ಹಿಸ್ಸೆಯ ಹಕ್ಕನ್ನು ನಾಗಮ್ಮ ರವರ ಹೆಸರಿಗೆ ಹಕ್ಕು ಖುಲಾಸೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜೆ ಅನಿಲ್ ರವರು ಮೃತಪಡುವ ಕಾಲಕ್ಕೆ ಆತನ ಹೆಸರಿನಲ್ಲಿ ಯಾವುದೆ ಚರ ಮತ್ತು ಸ್ಥಿರ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಜೆ ಅನಿಲ್ ರವರು **1** ನೇ ವಾದಿಯನ್ನು ಕಾನೂನುಬದ್ಧವಾಗಿ ಮತ್ತು ಶಾಸ್ತ್ರೋಕ್ತವಾಗಿ ಮದುವೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಜೆ ಅನಿಲ್ ರವರರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದ ಕಾರಣ ವಾದಿಯರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು **1** ನೇ ವಾದಿ ನನ್ನ ಅಕ್ಕನ ಮಗಳಾದ್ದರಿಂದ ಅವಳ ಪರವಾಗಿ ಸುಳ್ಳು ಪ್ರಮಾಣ

ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಳೆದ **30** ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿದ್ದೇನೆ. ನನಗೆ ಸೋಮವಾರಪೇಟೆ ತಾಲ್ಲೂಕು , ಬಳಗುಂದ ಗ್ರಾಮದಲ್ಲಿ ಯಾವುದೇ ಸ್ಥಿರ ಆಸ್ತಿಗಳು ಇರುವುದಿಲ್ಲ ಎಂದರೆ ಸರಿ. ನನಗೆ ಜೆ ಅನಿಲ್ ಕುಮಾರ್ ಮತ್ತು ಪ್ರತಿವಾದಿಯರ ಪರಿಚಯವಿರುವುದಿಲ್ಲ ಎಂದರೆ ಸರಿಯಲ್ಲ.

**5** ನೇ ಪ್ರತಿವಾದಿ ಪರ ಶ್ರೀ ಐ ಇ ಪಿ ವಕೀಲರು ಹಾಜರಿದ್ದು **1** ರಿಂದ **4** ಮತ್ತು **6** ರಿಂದ **8** ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲುನ್ನು **5** ನೇ ಪ್ರತಿವಾದಿ ಪರವಾಗಿ ಅಳವಡಿಸಿಕೊಳ್ಳುವಂತೆ ಕೇಳಿದ ಮೇರೆಗೆ ಯಥಾವತ್ತಾಗಿ ಅಳವಡಿಸಿಕೊಳ್ಳಲಾಯಿತು.

9 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ : ಇಲ್ಲ.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು